IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಚಿತ್ರದುರ್ಗ ಕೋಟೆ ಪರಿಸರದ ಶೈವ ದೇವಾಲಯಗಳು

**Maruthi H**
**Research Scholar**
**Kannada University Hampi**

ಕರ್ನಾಟಕ ರಾಜ್ಯ ಸಂದರ್ಭದಲ್ಲಿ ಪ್ರತಿಯೊಂದು ಧರ್ಮ ಪ್ರಬೇಧಗಳು ತಮ್ಮನ್ನು ರಕ್ಷಿಸಿಕೊಳ್ಳುವುದರೊಂದಿಗೆ ತಮ್ಮ ಪ್ರದೇಶವನ್ನು ಹೆಚ್ಚಿಸಿಕೊಳ್ಳುವ ಕೆಲಸದಲ್ಲಿಯೂ ಜ್ಞಾನವಾಗುತ್ತಾ ಬಂದಿರುವುದು ಸಮಕಾಲೀನ ಶಾಸನಗಳು ಹಾಗೂ ಸಾಹಿತ್ಯಿಕ ಸಾಕ್ಷಿಗಳಿಂದ ಸ್ಪಷ್ಟವಾಗುತ್ತದೆ. ಈ ವಿಸ್ತರಿಸಿಕೊಳ್ಳುವಿಕೆ ಎನ್ನುವುದು ತಾನು ಸಬಲವಾಗುವುದರ ಮೂಲಕ ತನ್ನ ಪ್ರತಿಸ್ಪರ್ಧಿ ಧರ್ಮವನ್ನು ದುರ್ಬಲಗೊಳಿಸುವುದು ಎಂಬೆರಡು ಕವಲುಗಳಲ್ಲಿ ಗೋಚರಿಸುತ್ತದೆ. ಬೇರೆ ಧರ್ಮೀಯರನ್ನು ಸ್ವ-ವಲಯಕ್ಕೆ ಮತಾಂತರಿಸಿಕೊಳ್ಳುವುದು. ತನ್ನನ್ನು ತಾನು ಸಬಲ ಮಾಡಿಕೊಳ್ಳುವುದಾದರೊ ಹಾಗೆ ಒಳಗೆ ಬರದೆ ಹೊರಗೆ ಉಳಿದವರಲ್ಲಿ ತನ್ನ ಸಂಸ್ಕೃತಿಯನ್ನು ಬೆಳೆಸುವುದು ಮತ್ತು ಅವರ ನಿರ್ಮಾಣಗಳನ್ನು ನಾಶ ಮಾಡುವುದು, ಅನ್ಯ ಧರ್ಮವನ್ನು ದುರ್ಬಲಗೊಳಿಸುವುದಾಗಿದೆ. ಇವುಗಳ ದೇವಾಲಯ ನಾಶವೆನ್ನುವುದು ಅವುಗಳ ಸಮೂಹ ನಾಶ ಕ್ರಿಯೆ, ರೂಪಾಂತರ ಕ್ರಿಯೆ ಮತ್ತು ರೂಪಾಂತರ ಕ್ರಿಯೆಯು ವಿರೋಧಿಗೆಂದೇ ಘಟಿಸಿರಬಹುದು. ಇಲ್ಲವೇ ಯಾವುದೋ ಸಾಮೂಹಿಕ ಮತಾಂತರವಾದ ಒಂದು ಗ್ರಾಮದ ಒಂದು ಮತೀಯರು ತಮ್ಮ ದೇವಾಲಯ ನಿಷ್ಪ್ರಯೋಜಕವಾಗಿ ಉಳಿಯಬಾರದೆಂದು ತಾವೇ ಅದನ್ನು ರೂಪಾಂತರಿಸಿಬಹುದು.[೧] ದೇವಾಲಯದ ಸಮೂಹ ನಾಶ ರೂಪಾಂತರ ಮತ್ತು ನಾಶ ಪ್ರಯತ್ನಗಳಿಗೆ ಮತ ಅಸೂಯೆಗಳು ಕಾರಣವಾಗಿದ್ದರೂ ಕೆಲವೊಮ್ಮೆ ಪರಸ್ಪರ ಧರ್ಮೀಯರಲ್ಲಿ ಜರುಗುತ್ತಿದ್ದ ವಾದ-ವಿವಾದಗಳು, ಸೋಲು ಕಾರಣವಾಗುತ್ತವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಈ ಪ್ರಕ್ರಿಯೆಗಳು ಜರುಗುತ್ತಾ ಬಂದಿರುವುದನ್ನು ಸಾಹಿತ್ಯದ ಹಿನ್ನೆಲೆಯಿಂದ ಸ್ಪಷ್ಟವಾಗುತ್ತದೆ. ಹಾಗಾಗಿ ಚಿತ್ರದುರ್ಗ ತಾಲ್ಲೂಕಿನ ಕೋಟೆ ಪರಿಸರದ ಶೈವ ದೇವಾಲಯಗಳನ್ನು ಕುರಿತು ಚರ್ಚಿಸುವುದು ಈ ಲೇಖನದ ಆಶಯವಾಗಿದೆ.

**ಹಿಡಂಬೇಶ್ವರ ದೇವಾಲಯ:** ಹಿಡಂಬೇಶ್ವರ ದೇವಾಲಯವು ಕೋಟೆಯ ಮೊದಲಿನ ಸುತ್ತಿನ ಪ್ರಕಾರದಲ್ಲಿ ದ್ವಾರಮಂಟಪವೆಂದು ಕರೆಯಲ್ಪಡುವ ಗಾಳಿಮಂಟಪವನ್ನು ಪ್ರವೇಶಿಸಿ ಒಳಗೆ ಹೋಗುತ್ತಾ ಮೇಲಿನ ದಿಮ್ಮಿಯನ್ನು ಏರಿದರೆ ಅಲ್ಲೇ ಪಶ್ಚಿಮಾಭಿಮುಖವಾಗಿ ನೆಲೆಗೊಂಡಿದೆ. ಇದು ಶೈವ ದೇವಾಲಯವಾಗಿದೆ.

**ತಲವಿನ್ಯಾಸ:** ಈ ದೇವಾಲಯವು ದ್ವಿಕೂಟವಾಗಿದ್ದು ಮುಖ್ಯ ಗರ್ಭಗೃಹ ಗುಹೆಯ ಒಳಗೆ ಬರುತ್ತದೆ. ಉಳಿದಂತೆ ಬಲಬದಿಯ ಗರ್ಭಗೃಹ, ದ್ವಿರಂಗ ಮಂಟಪಗಳು, ಮುಖಮಂಟಪ ಕಟ್ಟಡದ ರಚನೆಗಳಾಗಿವೆ.

**ಮುಖ್ಯ ಗರ್ಭಗೃಹ:** ಈ ದೇವಾಲಯದ ಮುಖ್ಯ ಗರ್ಭಗೃಹ ಗುಹೆಯ ಒಳಗಡೆ ಇದೆ. ಗರ್ಭಗೃಹ ವಿಶಾಲವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಬಾಗಿಲುವಾಡವು ಸಾಧಾರಣವಾದ ಅರ್ಧಕಂಬ ಏಕಶಾಖೆಯನ್ನು ಹೊಂದಿದೆ. ಅದರ ಪಾದದಲ್ಲಿ ಯಾವುದೇ ದ್ವಾರಪಾಲಕ ಶಿಲ್ಪಗಳಿಲ್ಲ. ಬಾಗಿಲುವಾಡದ ತೋರಣವು ಬಾಗಿದ ತೋರಣವಾಗಿದೆ. ಲಲಾಟಬಿಂಬ

ಸಾಧಾರಣವಾಗಿದೆ. ಇದು ಗುಹಾ ದೇವಾಲಯವಾಗಿರುವುದರಿಂದ ಗರ್ಭಗೃಹಕ್ಕೆ ಸಮನಾಗಿ ಮೇಲಿನ ಕಲ್ಲಿನ ಬಂಡೆಯ ಮೇಲೆ ಸ್ಥೂಪಿಯನ್ನು ಕಾಣಬಹುದು.

**ಬಲಬದಿಯ ಗರ್ಭಗೃಹ:** ಬಲಬದಿಯ ಗರ್ಭಗೃಹದಲ್ಲಿ ವೀರಭದ್ರೇಶ್ವರ ಮತ್ತು ಶೂಲಬ್ರಹ್ಮರ ಮೂರ್ತಿಶಿಲ್ಪಗಳಿವೆ. ಇದರ ಬಾಗಿಲುವಾಡವು ಸರಳವಾದ ಅರ್ಧಕಂಭ ಏಕಶಾಖೆಯನ್ನು ಹೊಂದಿದೆ. ಇದರ ಲಲಾಟಬಿಂಬ ಸಾಧಾರಣವಾಗಿದೆ.

**ದ್ವಿರಂಗ ಮಂಟಪಗಳು:** ಈ ದೇವಾಲಯದಲ್ಲಿ ಎರಡು ರಂಗಮಂಟಪಗಳಿರುವುದನ್ನು ಕಾಣಬಹುದು. ಮೊದಲನೆ ರಂಗಮಂಟಪದಲ್ಲಿ ೧೨ ಕಂಬಗಳು ಭಿತ್ತಿಯ ಒಳಗಿದ್ದು ಅವುಗಳನ್ನು ಅರ್ಧಕಂಬಗಳೆಂದು ಕರೆಯಬಹುದು. ಮಧ್ಯದಲ್ಲಿ ೪ ಸ್ವತಂತ್ರವಾದ ಕಲಾತ್ಮಕ ಕಂಬಗಳಿವೆ. ಈ ಭಾಗದಲ್ಲಿ ಕವಳಿಯ ವಿತಾನವನ್ನು ಕಾಣಬಹುದು. ಅವರಲ್ಲಿ ಹೆಚ್ಚು ಅಲಂಕಾರವಿಲ್ಲದ ಭುವನೇಶ್ವರಿಯಿದೆ. ರಂಗಮಂಟಪದ ಒಳಬಿತ್ತಿಯ ಸುತ್ತಲೂ ಗೂಡು ಮಂಟಪಗಳಿದ್ದು ಅವುಗಳಲ್ಲಿ ವಿವಿಧ ಮೂರ್ತಿಶಿಲ್ಪಗಳಿವೆ. ಅದರ ಮುಂದಿನ ಮತ್ತೊಂದು ರಂಗಮಂಟಪದ ಮುಖ್ಯ ಬಾಗಿಲುವಾಡವು ಅನೇಕ ಶಾಖೆಗಳಿಂದ ಕೂಡಿದ ದ್ವಾರಬಂಧ, ದ್ವಾರಬಂಧದ ಕೆಳಭಾಗದಲ್ಲಿನ ಕಳಸ ಇವೆಲ್ಲವೂ ಈ ದೇವಾಲಯದ ಬಳಿಯಿದ್ದ ಕಲ್ಯಾಣ ಚಾಲುಕ್ಯರ ವಾಸ್ತುಶೈಲಿಯ ಲಕ್ಷಣಗಳಾಗಿವೆ.[೨] ಅದರೊಂದಿಗೆ ಬಲ ಮತ್ತು ಎಡಭಾಗದಲ್ಲಿ ದ್ವಾರಬಾಗಿಲುಗಳಿವೆ. ರಂಗಮಂಟಪ ೨೭ ಅಡಿ ಅಗಲ ಹಾಗೂ ೩೦ ಅಡಿ ಉದ್ದವಿದೆ. ಇದರ ಒಳಭಿತ್ತಿಯಲ್ಲಿ ೪ ಅರ್ಧಕಂಬಗಳಿವೆ. ಇದರಲ್ಲಿ ಸುತ್ತಲು ಜಗುಲಿಯಿದ್ದು, ಅದರ ಮೇಲೆ ೮ ಕಂಬಗಳಿವೆ. ಅವುಗಳು ಮಿಶ್ರಕ ಕಂಬಗಳಾಗಿವೆ. ನಂತರ ಮಧ್ಯದಲ್ಲಿ ಸ್ವತಂತ್ರವಾದ ೪ ಕಂಬಗಳು ಕಲಾತ್ಮಕವಾಗಿವೆ. ಇಲ್ಲಿನ ವಿತಾನದಲ್ಲಿ ಸರಳವಾದ ಅಲಂಕಾರವಿದೆ.

**ಮುಖಮಂಟಪ:** ಮುಖಮಂಟಪ ಭಾಗದಲ್ಲಿ ಅಧಿಷ್ಠಾನದ ರಚನೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಅಧಿಷ್ಠಾನದಲ್ಲಿ ಉಪಾನ, ಪದ್ಮಗಳ, ಕಂಠ, ವೇದಿಕೆಯ ಭಾಗಗಳನ್ನು ಗುರುತಿಸಬಹುದು. ಮುಖಮಂಟಪವನ್ನು ಪ್ರವೇಶಿಸಲು ಒಂದು ಸೋಪಾನವಿದೆ. ಮುಖಮಂಟಪಕ್ಕೆ ಕಕ್ಷಾಸನವಿದೆ. ಅದರ ಮೇಲೆ ಆಸುಪಾಸುಗಳಲ್ಲಿ ಅರ್ಧಕಂಬಗಳಿವೆ. ಮೇಲೆ ಕಪೋತವಿದ್ದು, ಮೇಲಿನ ಭಾಗದಲ್ಲಿ ಗಾರೆ ರಚನೆಯ ಅನರ್ಪಿತ ಹಾರಗಳಿವೆ.

**ಕಂಬಗಳ ಶೈಲಿ:** ಈ ದೇವಾಲಯದಲ್ಲಿ ವಿಜಯನಗರ ಶೈಲಿಯ ಪೂರ್ವದಲ್ಲಿನ ಕಲೆಯನ್ನು ಹೊಂದಿದ ಕಂಬಗಳನ್ನು ಕಾಣಬಹುದು. ಅವುಗಳಲ್ಲಿ ಹೆಚ್ಚು ಮಿಶ್ರಿತ ಕಂಬಗಳಾಗಿವೆ. ಈ ಕಂಬಗಳ ರಚನೆಯಲ್ಲಿ ಪೀಠ, ಕಾಂಡ ಭಾಗದಲ್ಲಿ ಎರಡು ಚಚ್ಚೌಕದ ಭಾಗಗಳು ಅವುಗಳ ಮಧ್ಯೆದಲ್ಲಿ ಅಷ್ಟಪೈಲು ಹಾಗೂ ಹದಿನಾರು ಮುಖದ ಭಾಗಗಳು ಕಂಡುಬರುತ್ತವೆ. ನಂತರ ಕುಂಬ, ಫಲಕ ಹಾಗೂ ಹದಿನಾರು ಮುಖದ ಭಾಗಗಳು ಕಂಡುಬರುತ್ತವೆ. ನಂತರ ಫಲಕ ಹಾಗೂ ತರಂಗ ಭೋದಿಗೆಯನ್ನು ಕಾಣಬಹುದು. ಈ ಶೈಲಿಯನ್ನು ಗಮನಿಸಿದರೆ ಬಹುಶಃ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ದೇವಾಲಯದ ವಿವಿಧ ಭಾಗಗಳು ವಿಸ್ತಾರಗೊಳ್ಳುತ್ತಾ ಬಂದಿರಬಹುದು.

**ಮೂರ್ತಿಶಿಲ್ಪಗಳು:** ಹಿಡಂಬೇಶ್ವರ ದೇವಾಲಯದ ಮುಖ್ಯ ಗರ್ಭಗೃಹದಲ್ಲಿ ಶಿವಲಿಂಗ, ಬಲಬದಿಯ ಗರ್ಭಗೃಹದಲ್ಲಿ ವೀರಭದ್ರ, ಶೂಲಬ್ರಹ್ಮರು, ರಂಗಮಂಟಪದಲ್ಲಿ ನಂದಿಶಿಲ್ಪ, ಇಲ್ಲಿಯ ಭಿತ್ತಿಯ ಗೂಡುಗಳಲ್ಲಿನ ಮಹಿಷಾಸುರಮರ್ದಿನಿ, ಕಪಾಲಶಿವ, ಬ್ರಹ್ಮಮಾನಸ ಪುತ್ರಿ, ಭೈರವೇಶ್ವರ, ಶನೀಶ್ವರ, ರಾಹುಕೇತು ಮುಂತಾದ ಮೂರ್ತಿಶಿಲ್ಪಗಳನ್ನು ಕಾಣಬಹುದು. ಅವುಗಳಲ್ಲಿ ಕೆಲವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

**ಭೈರವೇಶ್ವರ:** ಭೈರವೇಶ್ವರನ ಹಿಂದಿನ ಬಲಗೈ ಹಾಗೂ ಎಡಗೈಗಳಲ್ಲಿ ತ್ರಿಶೂಲಗಳಿವೆ. ಮುಂದಿನ ಬಲಗೈಯಲ್ಲಿ ಖಡ್ಗವೂ ಮುಂದಿನ ಎಡಗೈಯಲ್ಲಿ ರಕ್ತ ಒಸರುತ್ತಿರುವ ರುಂಡವೂ ಇದೆ. ಒಸರುವ ರಕ್ತವನ್ನು ನಾಯಿಯೊಂದು ನೆಕ್ಕುತ್ತಿದೆ. ನಾಯಿಯನ್ನು ಸ್ತ್ರೀವಿಗ್ರಹವೊಂದು ಹಿಡಿದುಕೊಂಡಿದ್ದು ಅದರ ಕೆಲಸದಲ್ಲಿ ನೆರವಾಗುತ್ತಿರುವಂತಿದೆ. ಅಕ್ಕಪಕ್ಕಗಳಲ್ಲಿ ಭೃಂಗಿ ಹಾಗೂ ಇತರೆ ವಿಗ್ರಹಗಳಿವೆ. ದೇಹದಲ್ಲಿ ಹಲವಾರು ಆಭರಣಗಳನ್ನು ಧರಿಸಿದ್ದಾನೆ. ಕಾಲಲ್ಲಿ, ಕೈಗಳಲ್ಲಿ ಕಡಗಗಳು, ಕಿವಿಗಳಲ್ಲಿ ಕರ್ಣಕುಂಡಲಗಳನ್ನು ಧರಿಸಿದ್ದಾನೆ.

**ಮಹಿಷಾಸುರ ಮರ್ಧಿನಿ:** ದೇವಿಯ ಅಲಿಢಹನು ಭಂಗಿಯಲ್ಲಿ ಕೋಣದ ರೂಪದಲ್ಲಿರುವ ಮಹಿಷಾಸುರನ ಮೇಲೆ ತನ್ನ ಎಡಗಾಲನ್ನು ಇಟ್ಟು ನಿಂತು ಹಿಂದಿನ ಬಲಗೈಯಲ್ಲಿ ತ್ರಿಶೂಲದಿಂದ ಅದರ ದೇಹಕ್ಕೆ ಹಾಕಿ ಅದರ ಬಾಯಿಯನ್ನು ಎಡಗೈಯಲ್ಲಿ ಹಿಡಿದಿದ್ದಾಳೆ. ಉಳಿದ ಇತರೆ ಕೈಗಳಲ್ಲಿ ಖಡ್ಗ, ಅಂಕುಶ ಮುಂತಾದ ಆಯುಧಗಳು ಕಂಡುಬರುತ್ತವೆ. ದೇವಿಯ ಮುಖದಲ್ಲಿ ರೌದ್ರರೂಪವಿದೆ.

**ಬ್ರಹ್ಮಮಾನಸ ಪುತ್ರಿ:** ಬ್ರಹ್ಮಮಾನಸ ಪುತ್ರಿ ಎಂದು ಕರೆಯಲ್ಪಡುವ ಈ ಮೂರ್ತಿಯು ಹಾವಿನ ದೇಹ, ಸ್ತ್ರೀಯ ಎದೆಯ ಭಾಗ, ಬಲಗೈಯಲ್ಲಿ ಹರಿತವಾದ ಖಡ್ಗ ಹಾಗೂ ಎಡಗೈಯಲ್ಲಿ ಗುರಾಣಿ ಇದ್ದು ದೇವಿಯ ಮುಖದಲ್ಲಿ ಪುರುಷರೂ ಪದ ಹಾಗೂ ತಲೆಯ ಹಿಂಭಾಗ ಹಾವಿನ ಹೆಡೆ ಇರುವ ಅಂಶ ತಿಳಿದುಬರುತ್ತದೆ.

**ಕಪಾಲಶಿವ:** ಅರ್ಧ ಪರ್ದೂಂಕ ಆಸನದಲ್ಲಿ ಕುಳಿತಿರುವ ಕಪಾಲ ಶಿವನ ಕೈಗಳು ಹಾಗೂ ಕಾಲುಗಳಲ್ಲಿ ಕಡಗ ಹಾಗೂ ಇತರೆ ಆಭರಣಗಳನ್ನು ಧರಿಸಿದ್ದು, ಕುತ್ತಿಗೆ ಮತ್ತು ಹೊಟ್ಟೆಗೆ ಹಾವನ್ನು ಸುತ್ತಿಕೊಂಡಿದ್ದಾನೆ. ಕಿವಿಗಳಲ್ಲಿ ಕರ್ಣಕುಂಡಲಗಳನ್ನು ಧರಿಸಿದ್ದು ಜಟಾಧಾರಿಯಾಗಿದ್ದಾನೆ. ಮುಂದಿನ ಬಲಗೈಯಲ್ಲಿ ಖಡ್ಗ ಮುಂದಿನ ಎಡಗೈಯಲ್ಲಿ ಕಪಾಲವನ್ನು ಹಿಡಿದು ಇತರೆ ಕೈಗಳಲ್ಲಿ ಇತರೆ ಆಯುಧಗಳನ್ನು ಧರಿಸಿದ್ದಾನೆ.

**ಶನೀಶ್ವರ:** ಶನೀಶ್ವರ ತನ್ನ ಹಿಂದಿನ ಬಲಗೈಯಲ್ಲಿ ಬಾಣವನ್ನು ಹಿಂದಿನ ಎಡಗೈಯಲ್ಲಿ ಧನುಷ್‌ನ್ನು ಹಿಡಿದು ಇತರೆ ಕೈಗಳಲ್ಲಿ ಇತರೆ ಆಯುಧಗಳಿವೆ. ಕಾಲಲ್ಲಿ ಕಡಗ, ಕಿವಿಗಳಲ್ಲಿ ಕರ್ಣಕುಂಡಲ ವಿವಿಧ ಆಭರಣಗಳನ್ನು ಧರಿಸಿರುವ ಇವನು ತನ್ನ ವಾಹನ ಕಾಗೆಯ ಮೇಲೆ ಉದರಬಂಧ ಆಸನದಲ್ಲಿ ಕುಳಿತಿದ್ದಾನೆ.

**ಸಂಪಿಗೆ ಸಿದ್ದೇಶ್ವರ ದೇವಾಲಯ:** ಚಿತ್ರದುರ್ಗ ಕೋಟೆ ಪರಿಸರದ ಗುಹಾದೇವಾಲಯಗಳಲ್ಲಿ ಪ್ರಾಚೀನವೂ, ಪ್ರಮುಖವು ಆದ ದೇವಾಲಯ ಸಂಪಿಗೆ ಸಿದ್ದೇಶ್ವರ. ಮುಕ್ತ ದೇವಾಲಯ ಶಿಖರವೆಂದು ಕರೆಯಲ್ಪಡುವ ಈ ದೇವಾಲಯದ ಪರಿಸರದಲ್ಲಿ ಸುಗಂಧಭರಿತವಾದ ಕೆಂಡಸಂಪಿಗೆ ಮರಗಳಿರುವುದರಿಂದ ಈ ದೇವಾಲಯಕ್ಕೆ ಸಂಪಿಗೆ ಸಿದ್ದೇಶ್ವರ ದೇವಾಲಯವೆಂದು ಹೆಸರು ಬಂದಿದೆ. ದೇವಾಲಯವು ಉತ್ತರಾಭಿಮುಖವಾಗಿದೆ. ಇಲ್ಲಿಯ ಕೆಲವು ಅಂಶಗಳು ಕಲ್ಯಾಣ ಚಾಲುಕ್ಯರ ಶೈಲಿಯನ್ನು ಬಿಂಬಿಸುತ್ತಿವೆ. ದೇವಾಲಯದ ಪಾದಬಂಧ, ಅಧಿಷ್ಠಾನ, ಮುಖಮಂಟಪದಲ್ಲಿರುವ ಕಕ್ಷಾಸನ ಮತ್ತು ದೇವಾಲಯದ ಮುಂದಿರುವ ಪ್ರತೂಲಿ ರಚನೆ ದ್ವಾರಬಂಧದಲ್ಲಿನ ಸರಳ ಸ್ತಂಭಗಳ ವಿನ್ಯಾಸ ಮುಂತಾದವು ಕಲ್ಯಾಣ ಚಾಲುಕ್ಯರ ಶೈಲಿಯಾಗಿದೆ.[೩]

**ತಲವಿನ್ಯಾಸ:** ಸಂಪಿಗೆ ಸಿದ್ದೇಶ್ವರ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ರಂಗಮಂಟಪಗಳು ಬೃಹದಾಕಾರದ ಹುಟ್ಟು ಬಂಡೆಯ ಒಳಗಡೆಯ ರಚನೆಗೊಂಡಿವೆ. ಮುಖಮಂಟಪವು ಬಂಡೆಯ ಅಡಿಯಲ್ಲಿಯೇ ಇದ್ದರೂ ಬಂಡೆಯ ಹಾಸನ್ನು ತಗುಲದೆ ಸ್ವತಂತ್ರವಾಗಿ ನಿರ್ಮಾಣಗೊಂಡಿದೆ. ಉಳಿದಂತೆ ಈ ದೇವಾಲಯದ ಮುಂಭಾಗದಲ್ಲಿ ರಕ್ಷಣಾತ್ಮಕವೆಂಬಂತೆ ಸುತ್ತಲೂ ಪ್ರಕಾರವಿದ್ದು, ಪ್ರಾಕಾರಮಂಟಪದಲ್ಲಿ ಅಲ್ಲಲ್ಲಿ ಪುಟ್ಟ ಗುಡಿಗಳಿವೆ. ಇವು ತಲವಿನ್ಯಾಸದಲ್ಲಿ ಕಂಡುಬರುವ ಪ್ರಮುಖಾಂಶಗಳು.

**ಗರ್ಭಗೃಹ:** ಗರ್ಭಗೃಹದ ಬಲಪಾರ್ಶ್ವದ ಗೋಡೆಯು ಮಾತ್ರ ಪಾದಬಂಧ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದ್ದು, ಅದರಲ್ಲಿ ಉಪಪೀಠ, ಉಪಾನ, ಕುಮುದ ಹಾಗೂ ವೇದಿಕೆಯ ಭಾಗಗಳು ಕಂಡುಬರುತ್ತವೆ. ಇದು ಮೂಲತಃ ಗುಹಾಂತರ ದೇವಾಲಯವಾಗಿರುವುದರಿಂದ ಇದಕ್ಕೆ ಛಜ್ಜ, ಗ್ರೀವ, ಶಿಖರ ಹಾಗೂ ಸ್ತೂಪಿ ಭಾಗಗಳು ಕಂಡುಬರುವುದಿಲ್ಲ. ಗರ್ಭಗೃಹದ ಒಳಭಾಗ ಗಾಢಾಂಧಕಾರದ ನಿಶ್ಯಬ್ಧವಾದ ಗುಹೆಯಾಗಿದೆ. ಇದರಲ್ಲಿ ಗೋಡೆಗೆ ಹೊಂದಿಕೊಂಡಂತೆ ೨ ಅರ್ಧಕಂಬಗಳು, ಸ್ವತಂತ್ರವಾದ ೨ ಕಂಬಗಳು ಕಂಡುಬರುತ್ತವೆ.

**ಅಂತರಾಳ:** ಗರ್ಭಗೃಹದ ನಂತರ ಅಂತರಾಳ ಭಾಗ ಚಿಕ್ಕದಾಗಿದ್ದು ಅದರಲ್ಲಿ ಪಾರ್ವತಿ ಹಾಗೂ ನಂದಿ ವಿಗ್ರಹಗಳಿವೆ. ದ್ವಾರವು ಹಲವು ಸರಳ ಸ್ತಂಭಗಳ ಶಾಖೆಗಳನ್ನು ಹೊಂದಿದೆ. ಅಂತರಾಳದಲ್ಲಿ ಗೋಡೆಗೆ ಹೊಂದಿಕೊಂಡಂತೆ ೪ ಅರ್ಧಕಂಬಗಳು ಕಂಡುಬರುತ್ತವೆ.

**ರಂಗಮಂಟಪ:** ರಂಗಮಂಟಪದಲ್ಲಿ ಗೋಡೆಗೆ ಹೊಂದಿಕೊಂಡಂತೆ ೫ ಅರ್ಧ ಕಂಬಗಳಿವೆ. ಹಾಗೂ ಸ್ವತಂತ್ರವಾದ ೬ ಕಂಬಗಳು ಕಂಡುಬರುತ್ತವೆ. ರಂಗಮಂಟಪದ ವಿತಾನವು ಕದಳ ಅಂಕಣದಿಂದ ಕೂಡಿದ್ದು ಅದರಲ್ಲಿ ಸರಳವಾದ ಕಮಲದ ಚಿತ್ರವನ್ನು ಕೆತ್ತಲಾಗಿದೆ. ಇದರ ದ್ವಾರದ ಶಾಖೆಗಳು ಸರಳ ಸ್ತಂಭಗಳ ವಿನ್ಯಾಸವನ್ನು ಹೊಂದಿದೆ. ಇದರ ಒಳಭಿತ್ತಿಯಲ್ಲಿ ಕೋಷ್ಟಕಗಳಿದ್ದು ಅವುಗಳಲ್ಲಿ ವಿವಿಧ ಮೂರ್ತಿಶಿಲ್ಪಗಳನ್ನು ಕಾಣಬಹುದು. ಅವುಗಳನ್ನು ಮೂರ್ತಿಶಿಲ್ಪದಲ್ಲಿ ವರ್ಣಿಸಲಾಗಿದೆ.

**ಮುಖಮಂಟಪ:** ಮುಖಮಂಟಪವು ದೇವಾಲಯವನ್ನು ಬಳಸಿದಂತೆ ಪಾದಬಂಧ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಈ ಅಧಿಷ್ಠಾನದಲ್ಲಿ ಉಪಪೀಠ, ಉಪಾನ, ಕುಮುದ ಹಾಗೂ ವೇದಿಕೆಯ ರಚನೆಯು ಗಮನಾರ್ಹವಾಗಿದೆ. ಮುಖಮಂಟಪಕ್ಕೆ ಪ್ರವೇಶಿಸಲು ಒಂದು ಎತ್ತರವಾದ ಸೋಪಾನವಿದ್ದು ಇದರ ಎಡಬದಿಗಳಲ್ಲಿ ಆನೆ ಹಾಗೂ ಪದ್ಮಪುಷ್ಪದ ಉಬ್ಬುಶಿಲ್ಪಗಳಿವೆ. ಮುಖಮಂಟಪವು ಕಕ್ಷಾಸನವನ್ನು ಹೊಂದಿದ್ದು ಅದರಲ್ಲಿ ಸಾಧಾರಣ ಶೈಲಿಯ ಎರಡು ಕಂಬಗಳಿವೆ. ಅವುಗಳ ಮೇಲೆ ಛಜ್ಜ ಹಾಗೂ ಮೇಲ್ಛಾವಣಿ ಅದರಲ್ಲಿ ಬಿದ್ದ ನೀರು ಹೊರಗೆ ಬರುವ ಕಡದಂಗದ ವ್ಯವಸ್ಥೆಯಿದೆ. ನಂತರ ಗಾರೆ ಶಿಲ್ಪದ ಅನುಪಾತ ಹಾರದ ವಿನ್ಯಾಸವಿದೆ. ಗೋಡೆಯಲ್ಲಿ ೨ ಅರ್ಧ ಕಂಬಗಳಿವೆ. ಮುಖಮಂಟಪದ ಬಾಗಿಲ ಬಳಿ ಹಾಸುಗಲ್ಲ ಮೇಲೆ ಕೈಮುಗಿದುಕೊಂಡಿರುವ ಭಕ್ತನ ಕೆತ್ತನೆಯಿದೆ. ಅದರ ಬಳಿ ಚಿಂತಲಕಲದುರ್ಗದ ಶ್ರೀ ಕಾಟನಾಯಕನ ಮಗ ಕಂಪಲಯ ಎಂದು ಬರೆದಿದೆ.

**ಪ್ರಾಕಾರ:** ಸಂಪಿಗೆ ಸಿದ್ದೇಶ್ವರ ದೇವಾಲಯದ ಮುಂಭಾಗದಲ್ಲಿ ಅದನ್ನು ಬಳಸಿದಂತೆ ಪ್ರಾಕಾರ ಮಂಟಪ ಕಂಡುಬರುತ್ತದೆ. ಈ ಪ್ರಾಕಾರ ಮಂಟಪವು ೩ ೧/೪ ಅಡಿ ಎತ್ತರದ ಜಗುಲಿಯ ಮೇಲೆ ನಿರ್ಮಾಣಗೊಂಡಿದೆ.[೪] ಈ ಪ್ರಾಕಾರಕ್ಕೆ ಹೊಂದಿಕೊಂಡಂತೆ ಹಾಗೂ ಒಳಪ್ರವೇಶ ಪಡೆಯುವ ಹಾಗೆ ಒಂದು ದ್ವಾರಗೋಪುರವು ಇದ್ದು ಅದರ ಬಗ್ಗೆ ಕ್ರಿ.ಶ. ೧೩೫೬ರ ಶಾಸನದಲ್ಲಿ ಉಲ್ಲೇಖವಿದೆ. ಈ ಶಾಸನದಲ್ಲಿ ಹೇಳಿರುವಂತೆ ವಿಜಯನಗರ ರಾಜ ಪ್ರತಿನಿಧಿ ಮಲ್ಲಿನಾಥ ಒಡೆಯನು ಮೂರು ಅಂತಸ್ಥಿನ ಕಲ್ಲು ಉಪ್ಪರಿಗೆ ಹಾಗೂ ಕಲ್ಲು ಉಯ್ಯಾಲೆಯನ್ನು ನಿರ್ಮಿಸಿದನು. ಇದಕ್ಕೆ ಒಳಹೋಗಲು ಮೆಟ್ಟಿಲುಗಳಿದ್ದು ಮಂಚಬಂಧ, ಅಧಿಷ್ಠಾನ, ರುದ್ರಕಾಂತ ಸ್ತಂಭ ಮತ್ತು ಸೀಳುಬೋದಿಗೆಗಳಿಂದ ಕೂಡಿದೆ. ಶಿಖರದ ಮೇಲೆ ಮಹಾಪದ್ಮ ಮತ್ತು ಸ್ತೂಪಿಯನ್ನು ನಿರ್ಮಿಸುವ ಯೋಜನೆಯು ಇದ್ದಿರಬೇಕು.[೫] ಈ ಗೋಪುರದ ಎರಡನೇ ಹಂತದ ಒಂದು ಪಟ್ಟಿಯಲ್ಲಿ ಹೊರಮುಖದಲ್ಲಿ ನವಿಲು, ಸಿಂಹ, ಆನೆಗಳ ಸುಂದರವಾದ ಶಿಲ್ಪಗಳ ಸಾಲುಗಳನ್ನು ಕಡೆಯಲಾಗಿದೆ. ಎರಡು ಹಂತಗಳ ದ್ವಾರಶಾಖೆಗಳಲ್ಲಿ ಹಲವು ಚಿತ್ರಗಳನ್ನು ಕಾಣಬಹುದು. ಪ್ರಾಕಾರದ ಒಳ ಭಾಗದಲ್ಲಿ ಹಲವೆಡೆ ಕಕ್ಷಾಸನ ಕಂಡುಬರುತ್ತದೆ. ಪ್ರಾಕಾರದ ಪಶ್ಚಿಮಾಭಿಮುಖವಾಗಿ ಒಂದು ಗಣೇಶನ ಉಬ್ಬುಶಿಲ್ಪವಿದೆ. ಪ್ರಾಕಾರದ ಮಂಟಪವು ಹಲವು ಕಂಬಗಳಿಂದ ನಿರ್ಮಿತವಾಗಿದೆ. ಈ ಭಾಗದಲ್ಲಿ ೪ ಪುಟ್ಟ ಗುಡಿಗಳಿವೆ. ಪಶ್ಚಿಮಾಭಿಮುಖವಾಗಿರುವ ಒಂದು ಗುಡಿಯಲ್ಲಿ ಪ್ರಸ್ತುತ

ಭಗ್ನಗೊಂಡ ನಂದಿ ವಿಗ್ರಹವಿದೆ. ಈ ಗುಡಿಯ ಬಾಗಿಲುವಾಡದಲ್ಲಿ ಗಾರೆಯಿಂದ ನಿರ್ಮಿತವಾದ ದ್ವಾರಪಾಲಕ ಉಬ್ಬುಶಿಲ್ಪಗಳಿದ್ದು ಅವು ಗುರುತಿಸಲಾರದಷ್ಟು ಹಾಳಾಗಿವೆ. ಉಳಿದಂತೆ ಇತರೆ ಪುಟ್ಟ ಗುಡಿಗಳಲ್ಲಿ ದೇವತಾಮೂರ್ತಿಗಳಿಲ್ಲ.

**ಕಂಬಗಳ ಶೈಲಿ:** ಈ ದೇವಾಲಯದಲ್ಲಿ ತುಂಬಾ ಕಲಾತ್ಮಕವಾದ ಕಂಬಗಳು ಕಂಡು ಬರದಿದ್ದರೂ ಅವುಗಳ ರಚನೆಯಲ್ಲಿ ಪೀಠ, ಕಾಂಡ ಭಾಗದಲ್ಲಿ ಚಚ್ಚೌಕದ ಮುಖಗಳು, ಅದರ ಮಧ್ಯೆ ಅಷ್ಟಪೈಲು ಹಾಗೂ ಹದಿನಾರು ಮುಖದ ಭಾಗಗಳನ್ನು ಕಾಣಬಹುದು. ಮೇಲೆ ಕುಂಭ, ಫಲಕ, ತರಂಗಭೋದಿಗೆಯ ರಚನೆಯಿದೆ. ಇವುಗಳ ಮೇಲೆ ಯಾವುದೇ ಉಬ್ಬುಶಿಲ್ಪಗಳಿಲ್ಲ ಅದರೊಂದಿಗೆ ಇತರೆ ಮಿಶ್ರಕ ಕಂಬಗಳಿದ್ದು ಅವುಗಳ ಮೇಲೆ ವಜ್ರದ ಅಲಂಕಾರ, ಎಲೆಯ ಮಾದರಿ ಚಿತ್ರಗಳ ರಚನೆಯನ್ನು ಕಾಣಬಹುದು. ಈ ದೇವಾಲಯದ ಉಯ್ಯಾಲೆ ಕಂಬಗಳ ರಚನೆ ಸರಳವಾಗಿದ್ದು ಭದ್ರಕಪ್ರಕಾರಕ್ಕೆ ಸೇರುತ್ತದೆ. ಸ್ತಂಭದ ದಂಡವು ಎತ್ತರವಾಗಿದ್ದು ಅದರ ಕಂಭವು ಚೌಕಾಕಾರವಾಗಿದೆ. ಇದು ಕೂಡ ಇಲ್ಲಿನ ವಿಶಿಷ್ಟ ರೀತಿಯ ಕಂಬ.[೬]

**ಗಾರೆ ರಚನೆ:** ಈ ದೇವಾಲಯ ಸುಂದರವಾಗಿ ಕಾಣಲು ಗಾರೆ ರಚನೆಗಳು ಕಾರಣವಾಗಿವೆ. ಗಚ್ಚುಗಾರೆಯ ರಚನೆಯನ್ನು ದೇವಾಲಯದ ಮುಖಮಂಟಪ, ಪ್ರಕಾರದ ಮೇಲ್‌ಭಾಗದ ಸುತ್ತಲೂ ಹಾಗೂ ಗೋಪುರದ ಮೇಲ್‌ಭಾಗದಲ್ಲಿ ಕಾಣಬಹುದು. ಅದು ಅನರ್ಪಿತ ಹಾರದಿಂದ ಕೂಡಿದ್ದು ಒಳಗಡೆ ಪ್ರಸ್ತುತ ಮೂರ್ತಿಶಿಲ್ಪಗಳಿಲ್ಲ. ಆದರೆ ಗಾರೆಶಿಲ್ಪದ ಗೂಡುಗಳ ರಚನೆಯಲ್ಲಿ ವಿವಿಧ ರೀತಿಯ ಹೂಗಳು, ವಜ್ರಪಟ್ಟಿಕೆಯ ವಿನ್ಯಾಸ, ಸಿಂಹ ಕುಳಿತ ಮಾದರಿ, ಶಿಖರದ ಭಾಗದ ನಾಲ್ಕು ಮೂಲೆಗಳಲ್ಲಿ ಎರಡು ದೇಹ ಒಂದೇ ಶಿರದ ನಂದಿ ಶಿಲ್ಪ, ಪ್ರಾಕಾರ ಹಾಗೂ ಗರ್ಭಗೃಹದ ಹೊರಭಿತ್ತಿಯ ಮೇಲೆ ಗಿಳಿ, ನವಿಲು, ಹಂಸ ವಿವಿಧ ಪಕ್ಷಿಗಳ ರಚನೆಯನ್ನು ಗಾರೆಯಲ್ಲಿ ರಚಿಸಿರುವ ಅಂಶ ನಿಜಕ್ಕೂ ಆಶ್ಚರ್ಯವಾಗಿದೆ.

**ಮೂರ್ತಿಗಳು:** ಈ ದೇವಾಲಯದಲ್ಲಿ ಗರ್ಭಗೃಹದ ಸಿದ್ದನಾಥ, ಶಿವಲಿಂಗ, ಅಂತರಾಳದ ನಂದಿ, ಪಾರ್ವತಿ, ರಂಗಮಂಟಪದ ಶೂಲಬ್ರಹ್ಮಶಿಲ್ಪ ಹಾಗೂ ವೀರಭದ್ರೇಶ್ವರ ಮೂರ್ತಿಶಿಲ್ಪಗಳು ವಿಶಿಷ್ಟವಾಗಿದ್ದು, ಅವುಗಳು ಈ ಕೆಳಗಿನಂತೆ ವರ್ಣಿಸಲಾಗಿದೆ.

ವೀರಭದ್ರ: ವೀರಭದ್ರ ಮೂರ್ತಿ ಶಿಲ್ಪವು ಐದು ಅಡಿ ಎತ್ತರವಿದೆ. ವೀರಭದ್ರನು ಕಾಪಾಲಭೂಷಿತ ಕಿರೀಟ, ಸರ್ಪಕುಂಡಲ, ಕೆಂಡಾಭರಣ, ಪುಷ್ಪ ಮತ್ತು ರುಂಡಗಳ ಮಾಲೆ, ಖಡ್ಗ, ಕಾಲುಗಗ್ಗರ, ಕೈಕಂಕಣ, ಯಜ್ಞೋಪವೀತ ಸಾಧನಗಳಿಂದ ಅಲಂಕೃತನಾಗಿದ್ದಾನೆ. ಅವನ ಬಲಗಾಲಿನ ಬಳಿ ನಿವಾಸನದಲ್ಲಿ ಕುಳಿತಿರುವ ನರಸಿಂಹ, ಮಾನವಶಿರದ ಮೇಲೆ ಕಾಲಿಟ್ಟು ನಿಂತಿರುವ ನಂದಿ ಆಡಿನ ತಲೆಯ ದಕ್ಷಬ್ರಹ್ಮನ ಚಿತ್ರಗಳಿವೆ. ವೀರಭದ್ರನ ಪ್ರಭಾವಳಿಯ ರಚನೆ ಅಪೂರ್ಣವಾದುದ್ದೆಂದು ಕಲಾತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ವೀರಭದ್ರ ವಿಗ್ರಹವು ಹೊಯ್ಸಳ ಕಲಾಶೈಲಿಯಲ್ಲಿ ನಿರ್ಮಾಣವಾದುದೆಂತಲೂ ಹೇಳಿರುವರು.[೭]

**ಶೂಲಬ್ರಹ್ಮ ಶಿಲ್ಪ (ಗುಂಡುಬ್ರಹ್ಮಯ್ಯಗಳ ವಿಗ್ರಹ):** ರಂಗಮಂಟಪದ ಒಳಭಿತ್ತಿಯ ಒಂದು ಕೋಷ್ಟಕದಲ್ಲಿ ಕಂಡುಬರುವ ಈ ಶೂಲಬ್ರಹ್ಮ ಶಿಲ್ಪವು ವೀರಶೈವ ಪರಂಪರೆಯಲ್ಲಿ ಬರುವ ಗುಂಡಯ್ಯ ಹಾಗೂ ಬ್ರಹ್ಮಯ್ಯಗಳು ಎಂದು ಹೇಳಬಹುದು. ಈ ಮೂರ್ತಿಶಿಲ್ಪದಲ್ಲಿ ಇವರಿಬ್ಬರು ಅಕ್ಕಪಕ್ಕದಲ್ಲಿ ನಿಂತಿದ್ದು ಒಬ್ಬನು ಎಡಗೈಯಲ್ಲಿ ಮತ್ತೊಬ್ಬನು ಬಲಗೈಗಳಲ್ಲಿ ಶೂಲವನ್ನು ಹಿಡಿದು ಒಬ್ಬನು ಬಲ ಮತ್ತೊಬ್ಬನು ಎಡಕೈಗಳಲ್ಲಿ ಲಿಂಗವನ್ನು ಹಿಡಿದಿದ್ದು ದೇಹದ ತುಂಬಾ ಹಲವು ಆಭರಣಗಳನ್ನು ಧರಿಸಿಕೊಂಡಿದ್ದಾರೆ. ಪಾಳೆಯಗಾರರ ಧಾರ್ಮಿಕ ಸಂಪ್ರದಾಯ ವರ್ಗಕ್ಕೆ ಸೇರಿದ ವಿಗ್ರಹಗಳಲ್ಲಿ ಇದು ಮುಖ್ಯವಾದುದೆಂದು ಪಂಡಿತರ ಅಭಿಪ್ರಾಯ.[೮]

**ಪಾರ್ವತಿ:** ಅಂತರಾಳದಲ್ಲಿ ಪಾರ್ವತಿ ದೇವಿಯ ಮೂರ್ತಿಶಿಲ್ಪವಿದೆ. ಈ ದೇವಿಯ ತನ್ನ ಹಿಂದಿನ ಬಲಗೈಯಲ್ಲಿ ತ್ರಿಶೂಲ ಹಾಗೂ ಮುಂದಿನ ಬಲಗೈ ಅಭಯಹಸ್ತವಾಗಿಯೂ ಹಿಂದಿನ ಬಲಗೈಯಲ್ಲಿ ಢಮರು ಹಿಡಿದು ನಿಂತಿರುವ ಪಾರ್ವತಿಯು ವಸ್ತ್ರಾಭರಣದಿಂದ ಕೂಡಿದ್ದಾಳೆ. ಮುಖದಲ್ಲಿ ಸೌಮ್ಯ ಸ್ವರೂಪ ಕಂಡುಬರುತ್ತದೆ.

**ಕರಿವರ್ತಿ ಈಶ್ವರ ದೇವಾಲಯ:** ಚಿತ್ರದುರ್ಗ ಕೋಟೆಯ ಕಾಮನಸುತ್ತಿನ ಮುಂದೆ ಹಾಯ್ದುಹೋದರೆ ಅಲ್ಲಿ ಕರಿವರ್ತಿ ಈಶ್ವರ ಎಂದು ಕರೆಯುವ ಪುಟ್ಟ ದೇವಾಲಯವಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಬಹುತೇಕ ಭಾಗ ಗ್ರಾನೈಟ್‌ನಿಂದ ನಿರ್ಮಿಸಲಾಗಿದೆ. ಈ ದೇವಾಲಯವು ಗರ್ಭಗೃಹ ಹಾಗೂ ತೆರೆದ ಮಂಟಪವನ್ನು ಹೊಂದಿದ್ದು ಇಲ್ಲಿನ ಕಂಬಗಳ ಶೈಲಿ, ಸೂಕ್ಷ್ಮ ಕೆತ್ತನೆಗಳು ಮುಂತಾದವುಗಳಿಂದಾಗಿ ಇದು ಹೊಯ್ಸಳರ ಕಾಲದ ದೇವಾಲಯವೆಂದು ಹೇಳಬಹುದು. ಗರ್ಭಗೃಹವು ಚಚ್ಚೌಕವಾಗಿದ್ದು ಪ್ರಸ್ತುತ ಶಿವಲಿಂಗವಿದೆ. ಸುಮಾರು ಒಂದು ಅಡಿ ಪಾನವಟ್ಟದ ಮೇಲೆ ಶಿವಲಿಂಗವಿದೆ. ಇದರ ಬಾಗಿಲುವಾಡದಲ್ಲಿ ಪುಷ್ಪಶಾಖೆ ಹಾಗೂ ಪದ್ಮಶಾಲೆ ಎಂಬ ದ್ವಿಶಾಖೆಗಳನ್ನು ಕಾಣಬಹುದು. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ದ್ವಾರದ ಪಾದದಲ್ಲಿ ನಂದೀಶ್ವರ ಹಾಗೂ ಭೃಂಗೀಶ್ವರ ಎಂಬ ಶೈವದ್ವಾರಪಾಲಕರಿದ್ದಾರೆ.

ದೇವಾಲಯದ ಭಿತ್ತಿಯ ಒಳಗೆ ಒಟ್ಟು ೧೨ ಕಂಬಗಳಿವೆ. ಸ್ವತಂತ್ರವಾದ ೬ ಕಂಬಗಳಿವೆ. ಈ ೬ ಕಂಬಗಳಲ್ಲಿ ಎರಡು ಪ್ರಕಾರದ ಕಂಬಗಳಿವೆ. ಮಧ್ಯದ ನಾಲ್ಕು ಕಂಬಗಳು ಪೀಠ, ಕಾಂಡ ಭಾಗದಲ್ಲಿ ಚಚ್ಚೌಕದ ಎರಡು ಭಾಗಗಳು, ಅವುಗಳ ಮಧ್ಯೆ ಅಷ್ಟಕೋನ ಹಾಗೂ ಹದಿನಾರು ಕೋನಗಳ ರಚನೆ, ಕುಂಭ, ಲಶುನ, ಕಂಠ, ಕಮಲ, ಚಚ್ಚೌಕ ಫಲಕ, ಪುಷ್ಪಬೋದಿಗೆ ರಚನೆಯನ್ನು ಕಾಣಬಹುದು. ಇದು ಒಂದು ಪ್ರಕಾರದ ಕಂಬವಾಗಿದೆ. ಈ ಕಂಬದ ಚಚ್ಚೌಕದ ರಚನೆಯಲ್ಲಿ ನಾಟ್ಯ ಗಣಪತಿ, ವರಹಸ್ವಾಮಿ, ಹಿರಣ್ಯಕಷ್ಯಪುವದೆ, ವಿಷ್ಣುವಿನ ಕುರ್ಮಾವಾತಾರ, ಮತ್ಸ್ಯೆಅವತಾರ, ಪರುಷರಾಮ ಅವತಾರ, ವಾಮನನ ಅವತಾರ, ಗೋಪಿಕಾಸ್ತ್ರೀಯರೊಂದಿಗಿರುವ ಕೃಷ್ಣನ ಶಿಲ್ಪ, ವೇಣುಗೋಪಾಲ, ಕಾಳಿಂಗಮರ್ಧನ, ಮಹಿಷಾಸುರ ಮರ್ದಿನಿ, ಗಂಡಬೇರುಂಡ, ಆಂಜನೇಯ, ಬಲರಾಮ ಮುಂತಾದ ಹಲವು ಕಲಾತ್ಮಕ ಕೆತ್ತನೆಗಳನ್ನು ಈ ನಾಲ್ಕು ತೆರನಾದ ಕಂಬಗಳ ಮೇಲೆ ಕಾಣಬಹುದು. ಎರಡನೆ ಮಾದರಿ ಕಂಬಗಳೆಂದರೆ ಗಂಟಾಕಾರದ ರಚನೆಯ ಕಂಬಗಳು. ಇದರಲ್ಲಿ ಕೆಳಗೆ ಪೀಠ, ಕಾಂಡ ಭಾಗದಲ್ಲಿ ಗಂಟಾಕಾರದ ರಚನೆ, ಮೇಲೆ ಪುಷ್ಪಬೋದಿಗೆ ಇದೆ. ಈ ರೀತಿಯ ಕಂಬಗಳನ್ನು ಕಪ್ಪುಶಿಲೆಯಲ್ಲಿ ಕಡೆಯಲಾಗಿದೆ. ಹೀಗೆ ಕಂಬಗಳ ಶೈಲಿ, ಇಲ್ಲಿನ ಸೂಕ್ಷ್ಮ ಕೆತ್ತನೆ, ಇವೆಲ್ಲವುಗಳ ಆಧಾರದಿಂದ ಕರಿವರ್ತಿ ಈಶ್ವರ ದೇವಾಲಯವು ಹೊಯ್ಸಳರ ಕಾಲದಲ್ಲೇ ನಿರ್ಮಿತಿಗೊಂಡಿದೆ ಎಂದು ಹೇಳಬಹುದು.

ಅಲ್ಲದೇ ಈ ದೇವಾಲಯಕ್ಕೆ ಹೊಂದಿಕೊಂಡಂತೆ ಮುಂದೆ ಒಂದು ಸುಂದರವಾದ ಪುಷ್ಕರಣಿ ಇದ್ದು ಅದಕ್ಕೆ ಪಕ್ಕದ ಒಡ್ಡಿನಿಂದ ನೀರು ಹರಿದುಬರುವ ವ್ಯವಸ್ಥೆ ಇದೆ.

**ಉಮಾ ಮಹೇಶ್ವರ ದೇವಾಲಯ:** ಚಿತ್ರದುರ್ಗ ಕೋಟೆಯ ರಂಗಯ್ಯನ ಬಾಗಿಲು ಎಡಭಾಗದಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಇದು ಶೈವ ದೇವಾಲಯವಾಗಿದೆ. ಇದರ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ತೆರೆದ ಮಂಟಪವನ್ನು ಕಾಣಬಹುದು. ಈ ದೇವಾಲಯದ ವಿಮಾನವು ಫಾಂಸನ ಮಾದರಿಯಲ್ಲಿ ಚತುಷ್‌ತಲ ವಿಮಾನವಾಗಿದೆ. ಗರ್ಭಗೃಹದ ಹೊರಪಾರ್ಶ್ವಗಳ ಭಿತ್ತಿಯಲ್ಲಿ ನಾಗರಹಾವು, ಮೀನು, ಶಿವಲಿಂಗದ ಉಬ್ಬುಶಿಲ್ಪಗಳಿವೆ. ದೇವಾಲಯದ ಗರ್ಭಗೃಹ ಚಚ್ಚೌಕವಾಗಿದೆ. ಗರ್ಭಗೃಹದಲ್ಲಿ ಸುಮಾರು ೪ ಅಡಿಗಳೆತ್ತರದ ಶಿವಲಿಂಗವಿದೆ. ಅಂತರಾಳದಲ್ಲಿ ನಂದಿ ಇದೆ. ಅಂತರಾಳದ ಬಾಗಿಲುವಾಡದ ಪಾದದಲ್ಲಿ ಶೈವದ್ವಾರಪಾಲಕರಿದ್ದಾರೆ. ತೆರೆದ ಮಂಟಪದಲ್ಲಿ ಸ್ವತಂತ್ರವಾದ ೬ ಕಂಬಗಳಿದ್ದು ಅವುಗಳು ವಿಜಯನಗರ ಶೈಲಿಯಲ್ಲಿವೆ. ಅವುಗಳ ರಚನೆಯಲ್ಲಿ ಪೀಠ, ಕಾಂಡ, ಭಾಗದಲ್ಲಿ ಚಚ್ಚೌಕದ ಮುಖಗಳು ಅವುಗಳ ಮಧ್ಯೆ ಅಷ್ಟಕೋನ, ಹದಿನಾರು ಕೋನಗಳ ರಚನೆಗಳು, ಕೆಳಗಿನ ಚಚ್ಚೌಕದ ಮೇಲೆ ನಾಗಬಂಧವಿದೆ. ಮೇಲ್‌ಭಾಗದಲ್ಲಿ ವಿಜಯನಗರ ಕಾಲದ ಹೆಚ್ಚು ಬಾಗಿದ ಪುಷ್ಪಬೋದಿಗೆ ಈ ತೆರನಾದ ಕಂಬಗಳ ಚಚ್ಚೌಕದ ಮೇಲೆ ಜಟಾಧಾರಿ, ಕೋತಿ, ವೇಣುಗೋಪಾಲ, ಆನೆ, ನೃತ್ಯಗಣಪತಿ, ಬೇಡರಕಣ್ಣಪ್ಪ, ಆಂಜನೇಯ, ಗಂಡಬೇರುಂಡ, ನಂದಿ, ಗರುಡ, ವೀರಭದ್ರ, ರಾಜನ ಪರಿವಾರ ಹೀಗೆ ಹಲವು ರೀತಿಯ

ಉಬ್ಬುಶಿಲ್ಪಗಳಿವೆ. ತೆರೆದ ಮಂಟಪದಲ್ಲಿ ಒಂದು ವೀರಭದ್ರನ ಮೂರ್ತಿಶಿಲ್ಪವಿದೆ. ದೇವಾಲಯದ ಎದುರಿಗೆ ಪೀಠ, ಪೀಠದ ಮೇಲೆ ಒಂದು ದ್ವೀಪಸ್ತಂಭವಿದೆ. ದ್ವೀಪಸ್ತಂಭದ ಪಾದದಲ್ಲಿ ಭಕ್ತರ ಉಬ್ಬುಕೆತ್ತನೆಗಳಿವೆ. ಗ್ರಾನೈಟ್ ಶಿಲೆಯಿಂದ ಈ ದೇವಾಲಯದ ರಚನೆ ಹಾಗೂ ವಾಸ್ತುಶೈಲಿಯ ಆಧಾರದಿಂದ ಇದು ಪಾಳೆಯಗಾರರ ಕಾಲದ್ದಾಗಿದೆ. ಸುಮಾರು ಕ್ರಿ.ಶ. ೧೭–೧೭ನೇ ಶತಮಾನದ ದೇವಾಲಯವಾಗಿದೆ.

**ಈಶ್ವರ ದೇವಾಲಯ:** ಈ ದೇವಾಲಯವು ಚಿತ್ರದುರ್ಗ ಕೋಟೆ ಗಾರೆಬಾಗಿಲು ಬಳಿ ಅಂದರೆ ಪ್ರಸ್ತುತ ನಿರ್ದೇಶನದಂತೆ ಪಿಲ್ಲರ್‌ಹೌಸ್‌ನ ಬಳಿ ಇದೆ. ಇದನ್ನು ಗಾರೆ ಬಾಗಿಲು ಈಶ್ವರ ದೇವಾಲಯ ಎಂದು ಕರೆಯಲಾಗುವುದು. ಇದು ಶೈವ ದೇವಾಲಯವಾಗಿದ್ದು, ಪೂರ್ವಾಭಿಮುಖವಾಗಿದೆ. ಇದನ್ನು ಗ್ರಾನೈಟ್ ಶಿಲೆಯಿಂದಲೇ ನಿರ್ಮಿಸಲಾಗಿದೆ. ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ತೆರೆದ ಮಂಟಪಗಳನ್ನು ಹೊಂದಿದೆ. ಗರ್ಭಗೃಹವು ಚಚ್ಚೌಕವಾಗಿದ್ದು ಅದರಲ್ಲಿ ಶಿವಲಿಂಗವಿದೆ. ಅಂತರಾಳದಲ್ಲಿ ನಂದಿಶಿಲ್ಪವಿದೆ. ಅಂತರಾಳದ ಬಾಗಿಲುವಾಡವು ಸಾಧಾರಣ ಶಾಖೆಯನ್ನು ಹೊಂದಿದೆ. ಪಾದದಲ್ಲಿ ಶೈವದ್ವಾರಪಾಲಕರಿದ್ದಾರೆ. ಅಂತರಾಳದ ಅಕ್ಕಪಕ್ಕದಲ್ಲಿ ಶೈವ ನಾಗಕನ್ಯೆ, ನಂದಿಯ ಮುಂದೆ ನಿಂತ ಭಕ್ತ ಅವನ ಮೇಲೆ ಧಾಳಿ ಮಾಡುತ್ತಿರುವ ಸಿಂಹದ ಶಿಲ್ಪವನ್ನು ಕಾಣಬಹುದು. ಗರ್ಭಗೃಹದ ಹೊರಭಿತ್ತಿಯಲ್ಲಿ ಮೀನುಗಳು, ಉಬ್ಬುಶಿಲ್ಪಗಳಿವೆ. ಈ ದೇವಾಲಯವು ವಿಜಯನಗರೋತ್ತರ ಶೈಲಿಯಲ್ಲಿದ್ದು ಪಾಳೆಯಗಾರರ ಕಾಲಕ್ಕೆ ಇದನ್ನು ಸೇರಿಸಬಹುದು.

**ಕಾಶಿವಿಶ್ವನಾಥ ದೇವಾಲಯ:** ಬೃಹತ್ ಬಂಡೆಗಲ್ಲಿನ ಕೆಳಭಾಗದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ ಹಾಗೂ ದ್ವೀಪಸ್ತಂಭಗಳಿರುವ ದೇವಾಲಯವಿದು. ಗರ್ಭಗೃಹದ ಸುತ್ತಲೂ ಪ್ರದಕ್ಷಣ ಪಥವಿದೆ. ಗರ್ಭಗೃಹದಲ್ಲಿ ಎರಡೂವರೆ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹದ ಬಾಗಿಲುವಾಡದ ಲಲಾಟದಲ್ಲಿ ಗಣೇಶನ ಉಬ್ಬುಶಿಲ್ಪವಿದೆ. ಅಂತರಾಳದ ಬಾಗಿಲುವಾಡದಲ್ಲಿ ವ್ಯಾಳ, ಅರೆಗಂಬಗಳು ಲಲಾಟದಲ್ಲಿ ಪದ್ಮವನ್ನು ಕಡೆದಿರುವರು. ಸಭಾಮಂಟಪದಲ್ಲಿ ಎರಡು ಕಂಬಗಳಿವೆ. ಇವು ಚಚ್ಚೌಕ ಹಾಗೂ ಹದಿನಾರು ಮುಖಗಳಿವೆ. ಮೇಲ್ಭಾಗದ ಬೋದಿಗೆಯಲ್ಲಿ ವಿಜಯನಗರ ಶೈಲಿಯ ಹೂಮೊಗ್ಗುಗಳಿವೆ. ಸಭಾಮಂಟಪ ಬಾಗಿಲುವಾಡದ ಲಲಾಟದಲ್ಲಿ ಗಜಲಕ್ಷ್ಮಿ ಮತ್ತು ಕೆಳಗೆ ಇಕ್ಕೆಲಗಳಲ್ಲಿ ಶೈವದ್ವಾರಪಾಲಕರಿರುವರು. ಸಭಾಮಂಟಪದ ಮುಂದೆ ಮುಖಮಂಟಪವಿದ್ದು ಕುಳಿತು ವಿಶ್ರಮಿಸಿಕೊಳ್ಳಲು ಅನುವಾಗುವ ಕಕ್ಷಾಸನವಿದೆ. ಮುಂಬದಿಯಲ್ಲಿ ಸುಮಾರು ಹದಿನೈದು ಅಡಿಗಳೆತ್ತರದ ದ್ವೀಪಸ್ತಂಭವನ್ನು ನಿಲ್ಲಿಸಲಾಗಿದೆ.

**ವರಸಿದ್ಧಿ ವಿನಾಯಕ ದೇವಾಲಯ:** ಬೆಟ್ಟದ ಮೇಲೆ ಏರುವಾಗ ಸಿಗುವ ಪೂರ್ವಾಭಿಮುಖವಾಗಿರುವ ದೇವಾಲಯವಿದ್ದು ಆನೆಯಾಕಾರದಲ್ಲಿರುವ ಬೃಹತ್ ಬಂಡೆಯಲ್ಲಿ ಕಡೆಯಲಾದ ಗಣೇಶನಿಗೆ ದೇವಾಲಯವೊಂದನ್ನು ನಿರ್ಮಿಸಲಾಗಿದೆ. ಗರ್ಭಗೃಹ ಮತ್ತು ತೆರೆದ ಸಭಾಮಂಟಪವಿರುವ ಈ ದೇವಾಲಯದಲ್ಲಿ ಬಂಡೆಯ ಮೇಲೆ ಸುಮಾರು ಮೂರುವರೆ ಅಡಿಗಳಷ್ಟು ಎತ್ತರದಲ್ಲಿ ಕೊರೆಯಲಾದ ಗಣೇಶನ ಉಬ್ಬುಶಿಲ್ಪವಿದೆ. ಈ ದೇವಾಲಯವು ಬೆಟ್ಟವೇರುವ ಭಕ್ತರಿಗೆ ಕ್ಷಣಕಾಲ ವಿಶ್ರಮಿಸಿಕೊಳ್ಳಲು ನೆರವಾಗುವಂತಿದೆ. ಗರ್ಭಗೃಹದ ಬಾಗಿಲುವಾಡವು ಸರಳವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಹಾಗೂ ಕೆಳಗೆ ಇಕ್ಕೆಲಗಳಲ್ಲಿ ಪೂರ್ಣಕುಂಭಗಳ ಉಬ್ಬುಗೆತ್ತನೆಗಳಿವೆ. ಸಭಾಮಂಟಪದಲ್ಲಿ ನಾಲ್ಕು–ಎಂಟು–ಹದಿನಾರು ಮುಖಗಳಲ್ಲಿ ಕಡೆಯಲಾದ ಎರಡು ಕಂಬಗಳಿವೆ. ಈ ದೇವಾಲಯದ ಗರ್ಭಗೃಹದಲ್ಲಿರುವ ಮೂರ್ತಿಶಿಲ್ಪವನ್ನು ಬಂಡೆಯ ಹಿಂಬದಿಯಿಂದ ನೋಡಿದರೆ ಆನೆಯಂತೆ ಕಾಣುತ್ತಿರುವುದು ವಿಶೇಷವಾಗಿದೆ.

ಹೀಗೆ ಚಿತ್ರದುರ್ಗ ಕೋಟೆ ಪರಿಸರದಲ್ಲಿ ಶೈವಪಂಥಕ್ಕೆ ಸಂಬಂಧಿಸಿದಂತೆ ಈ ವರೆಗೆ ಬೆಳಕಿಗೆ ಬಂದಿರುವ ಶೈವದೇವಾಲಯಗಳ ಸಂಖ್ಯೆ ಹೆಚ್ಚು. ಈ ತಾಲ್ಲೂಕಿನ ಉಳಿದ ಧರ್ಮದ ದೇವಾಲಯಗಳಗಿಂತ ಶೈವ ದೇವಾಲಯಗಳು ಅಧಿಕವಾಗಿವೆ. ಆದ್ದರಿಂದ ಇಲ್ಲಿ ಶೈವ ಧರ್ಮವು ಹೆಚ್ಚಿನ ಪ್ರಭಾವದಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ. ಈ ಮೇಲಿನ ಚರ್ಚಿತ ದೇವಾಲಯಗಳು ಶೈವ ಧರ್ಮದ ವಾಸ್ತುಶಿಲ್ಪಕಲೆಯ ಅಧ್ಯಯನಕ್ಕೆ ಅಪರೂಪದ ಕೊಡುಗೆಗಳಾಗಿವೆ.

**ಕೊನೆ ಟಿಪ್ಪಣಿಗಳು**

೧. ಕಲಬುರ್ಗಿ ಎಂ.ಎಂ., ೧೯೯೮, ಪ್ರಾಚೀನ ಕರ್ನಾಟಕದಲ್ಲಿ ದೇವಾಲಯ ನಾಶ, ಮಾರ್ಗ ಸಂ.೩, ಪು. ೩೯–೪೦

೨. ವಸಂತಲಕ್ಷ್ಮಿ ಕೆ., ೨೦೦೬, ಚಿತ್ರದುರ್ಗ ಜಿಲ್ಲೆಯ ಕಲ್ಯಾಣ ಚಾಲುಕ್ಯರ ದೇವಾಲಯಗಳು, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್ (ಸಂ), ಪು. ೧೮೧

೩. ಅದೇ, ಪು. ೧೮೬

೪. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ. (ಸಂ), ೧೯೭೬, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಪು. ೪೨

೫. ವಸಂತಲಕ್ಷ್ಮಿ ಕೆ., ೨೦೦೬, ಪೂರ್ವೋಕ್ತ, ಪು. ೧೯೯

೬. ಅದೇ, ಪು. ೧೯೯

೭. ಮಹಂತೇಶ ಎನ್.ಎಸ್., ೨೦೦೮, ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ವಿಶ್ವಾಸ್ ಪ್ರಿಂಟ್ಸ್, ಬೆಂಗಳೂರು, ಪು. ೭೯–೮೦

೮. ಅದೇ, ಪು. ೮೧